# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 291 (414) |
| ಉತ್ತರಿಸಬೇಕಾದ ದಿನಾಂಕ | : | 19.08.2026 |
| ಸದಸ್ಯರ ಹೆಸರು | : | ಶ್ರೀಮತಿ ಬಲ್ಕೀಸ್ ಬಾನು(ವಿಧಾನಸಭೆಯಿಂದ ಚುನಾಯಿತರಾದರು) |
| ಉತ್ತರಿಸುವ ಸಚಿವರು | : | ಉಪ ಮುಖ್ಯಮಂತ್ರಿಯವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಬಡ ಸಾರ್ವಜನಿಕರಿಗೆ ನೀಡುತ್ತಿರುವ ಪಿಂಚಣಿಗಳಾವುವು; | ಸಾಮಾಜಿಕ ಭದ್ರತೆ ಯೋಜನೆಯಗಳಡಿ ಈ ಕೆಳಕಂಡ ಯೋಜನೆಗಳು ಅನುಷ್ಠಾನದಲ್ಲಿರುತ್ತವೆ. |

| ಕ್ರ ಸಂ | ಯೋಜನೆ | ಪಿಂಚಣಿ ಮೊತ್ತ |
|---|---|---|
| 1 | ವೃದ್ಧಾಪ್ಯ ವೇತನ<br>60 ರಿಂದ 64 ವರ್ಷ ಹಿರಿಯ ನಾಗರೀಕರು | ರೂ.600/- |
| | 65 ವರ್ಷ ಮೇಲ್ಪಟ್ಟವರಿಗೆ ಹಿರಿಯ ನಾಗರೀಕರು | ರೂ.1,200/- |
| 2 | ವಿಧವಾ ವೇತನ | ರೂ.800/- |
| 3 | ಸಂಧ್ಯಾ ಸುರಕ್ಷಾ ಯೋಜನೆ | ರೂ.1,200/- |
| 4 | ಅಂಗವಿಕಲ ವೇತನ<br>ಶೇಕಡ 40% ರಿಂದ ಶೇಕಡ 74% ರಷ್ಟು ಅಂಗವಿಕಲತೆಯುಳ್ಳವರಿಗೆ | ರೂ.800/- |
| | ಶೇಕಡ 75%ಕ್ಕಿಂತ ಹೆಚ್ಚಿನ ಅಂಗವಿಕಲತೆಯುಳ್ಳವರಿಗೆ | ರೂ.1,400/- |
| | ಶೇಕಡ 75% ಕ್ಕಿಂತ ಹೆಚ್ಚಿನ ಮನೋವೈಕಲ್ಯತೆ ಹೊಂದಿರುವವರು | ರೂ.2,000/- |
| 5 | ಮನಸ್ವಿನಿ ಯೋಜನೆ | ರೂ. 800/- |
| 6 | ಮೈತ್ರಿ ಯೋಜನೆ | ರೂ.1,200/- |
| 7 | ಎಂಡೋಸಲ್ಫಾನ್ ಮಿತ ವೇತನ<br>ಶೇಕಡ 25% ರಿಂದ 59% ಅಂಗವಿಕಲತೆ ಹೊಂದಿರುವವರು | ರೂ. 2,000/- |
| | ಶೇಕಡ 60% ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವವರು | ರೂ.4,000/- |
| 8 | ಸಾಲ ಭಾದೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತನ ಪತ್ನಿಗೆ | ರೂ.2,000/- |

| | | | | |
|---|---|---|---|---|
| | | | ವಿಧವಾ ವೇತನ | |
| | | 9 | ಆಸಿಡ್ ದಾಳಿಗೆ ಒಳಗಾದ ಮಹಿಳೆಯರಿಗೆ ಮಾಸಾಶನ | ರೂ10,000/- |
| | | 10 | ಮಾಜಿ ದೇವದಾಸಿ ಮಾಸಾಶನ | ರೂ. 2,000/- |
| | | 11 | ರಾಜ್ಯ ಸ್ವಾತಂತ್ರ್ಯ ಹೋರಾಟಗಾರರ ಪಿಂಚಣಿ | ರೂ.10,000/ |
| | | 12 | ಗೋವಾ ಸ್ವಾತಂತ್ರ್ಯ ಹೋರಾಟಗಾರರ ಪಿಂಚಣಿ | ರೂ. 9,000/- |
| (ಆ) | ವಿವಿಧ ಪಿಂಚಣಿಗಳನ್ನು ಪಡೆಯಲು ಇರುವ ಮಾನದಂಡಗಳೇನು; | ಸಾಮಾಜಿಕ ಭದ್ರತಾ ಯೋಜನೆಗಳಡಿ ಜಾರಿಗೊಳಿಸಲಾಗಿರುವ ಯೋಜನೆಗಳ ವಿವರ ಹಾಗೂ ಮಾನದಂಡಗಳನ್ನು ಅನುಬಂಧದಲ್ಲಿ ಒದಗಿಸಿದೆ. | | |
| (ಇ) | ಪಿಂಚಣಿ ಪಡೆಯಲು ಕುಟುಂಬದ ಆದಾಯ ಎಷ್ಟಿರಬೇಕು; | ಸರ್ಕಾರದ ಆದೇಶ ಸಂಖ್ಯೆ ಡಿಎಸ್‌ಎಸ್‌ಪಿ/ಎಂಎಸ್‌ಸಿ-05/2020 ದಿನಾಂಕ:10-02-2021 ರಂತೆ ಸಾಮಾಜಿಕ ಭದ್ರತಾ ಯೋಜನೆಗಳಡಿ ಕುಟುಂಬ ವಾರ್ಷಿಕ ಆದಾಯ ಮಿತಿಯನ್ನು ಗ್ರಾಮೀಣ ಪ್ರದೇಶದಲ್ಲಿ ರೂ.12,000/- ಮತ್ತು ನಗರ ಪ್ರದೇಶದಲ್ಲಿ ರೂ.17,000/- ಗಳಿಂದ ವಾರ್ಷಿಕ ರೂ.32,000/- ಗಳಿಗೆ ಹೆಚ್ಚಿಸಿ, ಆದೇಶ ಹೊರಡಿಸಲಾಗಿದೆ. | | |
| (ಈ) | ಕಂದಾಯ ಇಲಾಖೆ ಅಧಿಕಾರಿಗಳು ಆದಾಯ ಪ್ರಮಾಣ ಪತ್ರ ನೀಡಲು ವಿಳಂಬ ಹಾಗೂ ಆದಾಯ ಹೆಚ್ಚು ನಮೂದಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು) | ಇಲ್ಲ. | | |

**ಕಡತ ಸಂಖ್ಯೆ:ಆರ್‌ಡಿ 227 ಕೆಎಟಿ ಎಸ್‌ಎಸ್‌ಪಿ 2026**

(ಡಾ|| ಜಿ. ಪರಮೇಶ್ವರ)
ಉಪಮುಖ್ಯಮಂತ್ರಿ

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಬಲ್ಕೀಸ್ ಬಾನು (ವಿಧಾನ ಸಭೆಯಿಂದ ಚುನಾಯಿತರಾದರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 291 (414) ಮಾನದಂಡಗಳು**

**ಅನುಬಂಧ**

| ಕ್ರಮ ಸಂಖ್ಯೆ | ಯೋಜನೆ / ಕಾರ್ಯಕ್ರಮದ ಹೆಸರು | ಪಿಂಚಣಿ ಮೊತ್ತ | ಯೋಜನೆ ಸೌಲಭ್ಯ ಪಡೆಯಲು ಫಲಾನುಭವಿಗಳಿಗೆ ಇರಬೇಕಾದ ಅರ್ಹತೆ | ಸಲ್ಲಿಸಬೇಕಾದ ದಾಖಲೆಗಳು |
|---|---|---|---|---|
| 1 | ವೃದ್ಧಾಪ್ಯ ವೇತನ<br>ವಯಸ್ಸು 60 ರಿಂದ 64 ವರ್ಷ | ರೂ. 600/- | ➢ 60 ವರ್ಷ ಮೇಲ್ಪಟ್ಟ ಹಿರಿಯ ನಾಗರೀಕರು<br>➢ ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಕುಟುಂಬದ ಆದಾಯ ರೂ. 32,000/- ಗಳಿಗಿಂತ ಕಡಿಮೆ ಇರಬೇಕು | ➢ ಆಧಾರ್ ಕಾರ್ಡ್ ಪ್ರತಿ<br>➢ ವಯಸ್ಸಿನ ದೃಢೀಕೃತ ದಾಖಲೆ<br>➢ ವಿಳಾಸಕ್ಕೆ ಸಂಬಂಧಿಸಿದ ದೃಢೀಕೃತ ದಾಖಲೆ<br>➢ ಬ್ಯಾಂಕ್ / ಅಂಚೆ ಖಾತೆ ಪ್ರತಿ |
| | 65 ವರ್ಷ ಮೇಲ್ಪಟ್ಟು | ರೂ. 1200/- | | |
| 2 | ವಿಧವಾ ವೇತನ | ರೂ. 800/- | ➢ 18 ವರ್ಷ ಮೇಲ್ಪಟ್ಟ ವಿಧವೆಯರು<br>➢ ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಕುಟುಂಬದ ಆದಾಯ ರೂ. 32,000/- ಗಳಿಗಿಂತ ಕಡಿಮೆ ಇರಬೇಕು | ➢ ಆಧಾರ್ ಕಾರ್ಡ್ ಪ್ರತಿ<br>➢ ವಿಳಾಸಕ್ಕೆ ಸಂಬಂಧಿಸಿದ ದೃಢೀಕೃತ ದಾಖಲೆ<br>➢ ಪತಿಯ ಮರಣ ದೃಢೀಕರಣ ಪತ್ರ<br>➢ ಬ್ಯಾಂಕ್ / ಅಂಚೆ ಖಾತೆ ಪ್ರತಿ<br>➢ ವಯಸ್ಸಿನ ದೃಢೀಕೃತ ದಾಖಲೆ |
| 3 | ಅಂಗವಿಕಲ ವೇತನ<br>ಶೇಕಡ 40% ಅಂಗವಿಕಲತೆ ಹೊಂದಿರುವವರು | ರೂ. 800/- | ➢ ಬಡತನ ರೇಖೆಗಿಂತ ಕೆಳಗಿರುವ ಎಲ್ಲಾ ಅಂಗವಿಕಲರು<br>➢ ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಕುಟುಂಬದ ಆದಾಯ ರೂ. 32,000/- ಗಳಿಗಿಂತ ಕಡಿಮೆ ಇರಬೇಕು | ➢ ಆಧಾರ್ ಕಾರ್ಡ್ ಪ್ರತಿ<br>➢ ವಯಸ್ಸಿನ ದೃಢೀಕೃತ ದಾಖಲೆ<br>➢ ವಿಳಾಸಕ್ಕೆ ಸಂಬಂಧಿಸಿದ ದೃಢೀಕೃತ ದಾಖಲೆ<br>➢ ಬ್ಯಾಂಕ್ / ಅಂಚೆ ಖಾತೆ ಪ್ರತಿ<br>➢ ಅಂಗವಿಕಲತೆ ಶೇಕಡಾವಾರು ವೈದ್ಯಕೀಯ ದೃಢೀಕರಣ ಪತ್ರ. |
| | ಶೇಕಡ 75% ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವವರು | ರೂ. 1,400/- | | |
| | ಶೇಕಡ 75% ಕ್ಕಿಂತ ಹೆಚ್ಚಿನ ಮನೋವೈಕಲ್ಯತೆ ಹೊಂದಿರುವವರು | ರೂ. 2,000/- | | |
| 4 | ಸಂಧ್ಯಾ ಸುರಕ್ಷಾ ಯೋಜನೆ | ರೂ. 1,200/- | ➢ 65 ವರ್ಷ ಮೇಲ್ಪಟ್ಟ ವಯಸ್ಸಿನ ಹಿರಿಯ ನಾಗರೀಕರು<br>➢ ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಕುಟುಂಬದ ಆದಾಯ ರೂ. 32,000/- ಗಳಿಗಿಂತ ಕಡಿಮೆ ಇರಬೇಕು | ➢ ಆಧಾರ್ ಕಾರ್ಡ್ ಪ್ರತಿ<br>➢ ವಯಸ್ಸಿನ ದೃಢೀಕೃತ ದಾಖಲೆ<br>➢ ವಿಳಾಸಕ್ಕೆ ಸಂಬಂಧಿಸಿದ ದೃಢೀಕೃತ ದಾಖಲೆ<br>➢ ಬ್ಯಾಂಕ್ / ಅಂಚೆ ಖಾತೆ ಪ್ರತಿ |

| ಕ್ರಮ ಸಂ ಖ್ಯೆ | ಯೋಜನೆ / ಕಾರ್ಯಕ್ರಮದ ಹೆಸರು | ಪಿಂಚಣಿ ಮೊತ್ತ | ಯೋಜನೆ ಸೌಲಭ್ಯ ಪಡೆಯಲು ಫಲಾನುಭವಿಗಳಿಗೆ ಇರಬೇಕಾದ ಅರ್ಹತೆ | ಸಲ್ಲಿಸಬೇಕಾದ ದಾಖಲೆಗಳು |
|---|---|---|---|---|
| 5 | ಮನಸ್ವಿನಿ ಯೋಜನೆ | ರೂ. 800/- | ➢ 40 ರಿಂದ 64 ವರ್ಷ ವಯಸ್ಸಿನೊಳಗಿನ ಅವಿವಾಹಿತ ಮಹಿಳೆಯರು<br>➢ ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಕುಟುಂಬದ ಆದಾಯ ರೂ. 32,000/- ಗಳಿಗಿಂತ ಕಡಿಮೆ ಇರಬೇಕು | ➢ ಆಧಾರ್ ಕಾರ್ಡ್ ಪ್ರತಿ<br>➢ ವಯಸ್ಸಿನ ದೃಢೀಕೃತ ದಾಖಲೆ<br>➢ ವಿಳಾಸಕ್ಕೆ ಸಂಬಂಧಿಸಿದ ದೃಢೀಕೃತ ದಾಖಲೆ<br>➢ ಬ್ಯಾಂಕ್ / ಅಂಚೆ ಖಾತೆ ಪ್ರತಿ<br>➢ ವಿಚ್ಛೇದಿತ ಪ್ರಮಾಣ ಪಡೆಯದಿದ್ದಲ್ಲಿ ಸ್ವಯಂ ದೃಢೀಕರಣ ಪತ್ರ |
| 6 | ಮೈತ್ರಿ ಯೋಜನೆ | ರೂ. 1200/- | ➢ 25 ರಿಂದ 64 ವರ್ಷ ವಯಸ್ಸಿನೊಳಗಿನ ಲಿಂಗತ್ವ ಅಲ್ಪ ಸಂಖ್ಯಾತರು<br>➢ ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿ ಕುಟುಂಬದ ಆದಾಯ ರೂ. 32,000/- ಗಳಿಗಿಂತ ಕಡಿಮೆ ಇರಬೇಕು | ➢ ಆಧಾರ್ ಕಾರ್ಡ್ ಪ್ರತಿ<br>➢ ವಿಳಾಸಕ್ಕೆ ಸಂಬಂಧಿಸಿದ ದೃಢೀಕೃತ ದಾಖಲೆ<br>➢ ಬ್ಯಾಂಕ್ / ಅಂಚೆ ಖಾತೆ ಪ್ರತಿ<br>➢ ವಯಸ್ಸಿನ ದೃಢೀಕೃತ ದಾಖಲೆ<br>➢ ಸ್ವಯಂ ದೃಢೀಕರಣ ಪತ್ರ ಅಥವಾ ಸಮುದಾಯ ಆಧಾರಿತ ಸಂಸ್ಥೆಗಳಾದ 'ಸಂಗಮ' ಮತ್ತು 'ಕೆ.ಎಸ್.ಎಂ.ಎಫ್.' ರಿಂದ ಪಡೆದ ಪ್ರಮಾಣ ಪತ್ರ |
| 7 | ಸಾಲ ಭಾದೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತ ಪತ್ನಿಯರಿಗೆ ವಿಧವಾ ಮಾಸಾಶನ | ರೂ. 2,000/- | ➢ ಸಾಲ ಭಾದೆಯಿಂದ ಆತ್ಮಹತ್ಯೆ ಮಾಡಿಕೊಂಡ ಮೃತ ರೈತನ ಪತ್ನಿಯಾಗಿದ್ದು ಕೃಷಿ ಇಲಾಖೆಯಿಂದ ರೈತರ ಆತ್ಮಹತ್ಯೆ ಪ್ರಕರಣಗಳಡಿ ಗುರುತಿಸಿ ಪರಿಹಾರ ಪಡೆದುಕೊಂಡಿರುವವರಿಗೆ | ➢ ಆಧಾರ್ ಕಾರ್ಡ್ ಪ್ರತಿ<br>➢ ವಿಳಾಸಕ್ಕೆ ಸಂಬಂಧಿಸಿದ ದೃಢೀಕೃತ ದಾಖಲೆ<br>➢ ಬ್ಯಾಂಕ್ / ಅಂಚೆ ಖಾತೆ ಪ್ರತಿ<br>➢ ವಯಸ್ಸಿನ ದೃಢೀಕೃತ ದಾಖಲೆ<br>➢ ಕೃಷಿ ಇಲಾಖೆಯಿಂದ ಪರಿಹಾರ ಪಡೆದ ಬಗ್ಗೆ ಆದೇಶ ಪ್ರತಿ |
| 8 | ಆಸಿಡ್ ದಾಳಿಗೆ ಒಳಗಾದ ಮಹಿಳೆಯರಿಗೆ ಸಹಾಯ ಧನ | ರೂ. 10,000/- | ➢ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಈಗಾಗಲೇ ಗುರುತಿಸಿ ಸುರಕ್ಷಾ ಯೋಜನೆಯಡಿ ಪರಿಹಾರ ಪಡೆದುಕೊಂಡಿರುವವರಿಗೆ | ➢ ಆಧಾರ್ ಕಾರ್ಡ್ ಪ್ರತಿ<br>➢ ವಿಳಾಸಕ್ಕೆ ಸಂಬಂಧಿಸಿದ ದೃಢೀಕೃತ ದಾಖಲೆ<br>➢ ಬ್ಯಾಂಕ್ / ಅಂಚೆ ಖಾತೆ ಪ್ರತಿ<br>➢ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಪರಿಹಾರ ಪಡೆದ ಬಗ್ಗೆ ಆದೇಶ ಪತ್ರ |
| 9 | ಎಂಡೋಸಲ್ಫಾನ್ ಸಂತ್ರಸ್ಥರಿಗೆ ಮಿತ ವೇತನ<br>ಶೇಕಡ 25 ರಿಂದ 59% ಅಂಗವಿಕಲತೆ ಹೊಂದಿರುವವರು | ರೂ. 2,000/- | ➢ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಗುರುತಿಸಿರುವ ಫಲಾನುಭವಿಗಳು<br>➢ **ಪರಿಷ್ಕೃತ ಆದೇಶ ಸಂಖ್ಯೆ : ಆರ್ ಡಿ 184 ಡಿಎಸ್ ಪಿ 2019, ದಿನಾಂಕ : 3/6/2021.** | ➢ ಆಧಾರ್ ಕಾರ್ಡ್ ಪ್ರತಿ<br>➢ ವಿಳಾಸಕ್ಕೆ ಸಂಬಂಧಿಸಿದ ದೃಢೀಕೃತ ದಾಖಲೆ<br>➢ ಬ್ಯಾಂಕ್ / ಅಂಚೆ ಖಾತೆ ಪ್ರತಿ<br>➢ ಆರೋಗ್ಯ ಇಲಾಖೆಯಿಂದ ಎಂಡೋಸಲ್ಫಾನ್ ಸಂತ್ರಸ್ಥರೆಂದು ಗುರುತಿಸಿದ ಬಗ್ಗೆ ಆದೇಶ |

| ಕ್ರಮ ಸಂಖ್ಯೆ | ಯೋಜನೆ / ಕಾರ್ಯಕ್ರಮದ ಹೆಸರು | ಪಿಂಚಣಿ ಮೊತ್ತ | ಯೋಜನೆ ಸೌಲಭ್ಯ ಪಡೆಯಲು ಫಲಾನುಭವಿಗಳಿಗೆ ಇರಬೇಕಾದ ಅರ್ಹತೆ | ಸಲ್ಲಿಸಬೇಕಾದ ದಾಖಲೆಗಳು |
|---|---|---|---|---|
| | ಶೇಕಡ 60% ಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವವರು | ರೂ. 4,000/- | | |
| 10 | ಮಾಜಿ ದೇವದಾಸಿ ಮಾಸಾಶನ | ರೂ.2000 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ನಡೆಸಲಾದ ಸಮೀಕ್ಷೆಯಲ್ಲಿ ಗುರುತಿಸಲಾದ ದೇವದಾಸಿಯರಿಗೆ ಮಾಸಾಶನ | ➢ 45 ವರ್ಷ ಮೇಲ್ಪಟ್ಟ ಮಹಿಳೆಯರು<br>➢ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ನಡೆಸಲಾದ ಸಮೀಕ್ಷೆಯಲ್ಲಿ ಗುರುತಿಸಲಾದ ಫಲಾನುಭವಿಗಳು<br>➢ ಆಧಾರ್ ಕಾರ್ಡ್ ಪ್ರತಿ<br>➢ ವಿಳಾಸಕ್ಕೆ ಸಂಬಂಧಿಸಿದ ದೃಢೀಕೃತ ದಾಖಲೆ<br>➢ ವೈದ್ಯಕೀಯ ಪ್ರಮಾಣ ಪತ್ರ |
| 11 | ರಾಜ್ಯ ಸ್ವತಂತ್ರ ಹೋರಾಟಗಾರರ ಪಿಂಚಣಿ | ರೂ.10,000 | ರಾಜ್ಯ ಸ್ವತಂತ್ರ ಹೋರಾಟಗಾರರಿಗೆ ಮಾಸಿಕ ಪಿಂಚಣಿ ಸೌಲಭ್ಯ ಮತ್ತು ಕುಟುಂಬ ಪಿಂಚಣಿ | ➢ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ ಜೈಲು ಶಿಕ್ಷೆ ಅನುಭವಿಸಿರುವುದಕ್ಕೆ ಜೈಲು ಅಧಿಕಾರಿಗಳಿಂದ ಪಡೆದ ಮೂಲ ಜೈಲು ಪ್ರಮಾಣಪತ್ರ ಅಥವಾ ಜೈಲು ಶಿಕ್ಷೆ ಅನುಭವಿಸಿದ ಅವಧಿಯ ದಾಖಲಾತಿಗಳು ಲಭ್ಯವಿಲ್ಲದ ಬಗ್ಗೆ ಸಂಬಂಧಿಸಿದ ಅಧಿಕಾರಿಗಳಿಂದ ಪಡೆದ ಮೂಲ ಹಿಂಬರಹ.<br>➢ ಕರ್ನಾಟಕ ವಿಧಾನ ಮಂಡಲ ಅಥವಾ ಸಂಸತ್ ಸದಸ್ಯರ [ಹಾಲಿ ಅಥವಾ ಮಾಜಿ] ಇವರಿಂದ ಪಡೆದ ಸಹ ಬಂಧಿ ಪ್ರಮಾಣಪತ್ರ ಅಥವಾ ಜೈಲು ಶಿಕ್ಷೆ ಅನುಭವಿಸಿರುವ ಹಾಗೂ ಕೇಂದ್ರ ಮತ್ತು ರಾಜ್ಯ ಗೌರವ ಧನವನ್ನು ಪಡೆದಿರುವ ಇಬ್ಬರು ಸ್ವಾತಂತ್ರ್ಯ ಯೋಧರಿಂದ ಪಡೆದ ಸಹಬಂಧಿ ಪ್ರಮಾಣ ಪತ್ರಗಳ ಮೂಲಪತ್ರ ಅಥವಾ ಭೂಗತ ಕಾರ್ಯ ನಿರ್ವಹಿಸಿರುವುದಕ್ಕೆ ಪೋಲೀಸ್ ಅಧಿಕಾರಿಗಳಿಂದ ಪಡೆದ ಅರೆಸ್ಟ್ ವಾರೆಂಟ್ ಅಥವಾ ಘೋಷಿತ ಅಪರಾಧಿ ಎಂಬ ಘೋಷಣೆ[proclaimed offender] ಅಥವಾ ಸ್ವಾತಂತ್ರ್ಯ ಹೋರಾಟ ಸಂಬಂಧ ಅರ್ಜಿದಾರರ ವಿರುದ್ಧ ಹೂಡಲಾಗಿದ್ದ ಮೊಕದ್ದಮೆ ದಾಖಲೆಗಳು ಅಥವಾ ನ್ಯಾಯಾಲಯದ ಆದೇಶ ಅಥವಾ ಆದಾಖಲೆಗಳು ಲಭ್ಯವಿಲ್ಲದಿದ್ದಲ್ಲಿ ದಾಖಲೆಗಳು ಲಭ್ಯವಿಲ್ಲವೆಂಬ ಬಗ್ಗೆ ಪೋಲೀಸ್ ಅಧಿಕಾರಿ ಅಥವಾ |

| ಕ್ರಮ ಸಂಖ್ಯೆ | ಯೋಜನೆ / ಕಾರ್ಯಕ್ರಮದ ಹೆಸರು | ಪಿಂಚಣಿ ಮೊತ್ತ | ಯೋಜನೆ ಸೌಲಭ್ಯ ಪಡೆಯಲು ಫಲಾನುಭವಿಗಳಿಗೆ ಇರಬೇಕಾದ ಅರ್ಹತೆ | ಸಲ್ಲಿಸಬೇಕಾದ ದಾಖಲೆಗಳು |
|---|---|---|---|---|
| | | | | ಜಿಲ್ಲಾಧಿಕಾರಿ ಅಥವಾ ನ್ಯಾಯಾಲಯದಿಂದ ಪಡೆದ ಹಿಂಬರಹ.<br>➢ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದಂತೆ ಮಾಡಿದ ಹೋರಾಟ ಹಾಗೂ ಅನುಭವಿಸಿದ ಶಿಕ್ಷೆಯ ಬಗ್ಗೆ, ಪ್ರಥಮ ದರ್ಜೆ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ರವರ ಮುಂದೆ ಹೇಳಿಕೆ ನೀಡಿದ ಮೂಲ ಪ್ರಮಾಣಪತ್ರ(ಅಫಿಡವಿಟ್).<br>➢ ಭೂಗತ ಕಾರ್ಯ ನಿರ್ವಹಿಸಿರುವುದಕ್ಕೆ ಶಿಬಿರದ ಶಿಬಿರಾಧಿಪತಿಗಳು ಪ್ರಥಮ ದರ್ಜೆ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ರವರ ಮುಂದೆ ಹೇಳಿಕೆ ನೀಡಿದ ಮೂಲ ಪ್ರಮಾಣಪತ್ರ.<br>➢ ವೈದ್ಯಾಧಿಕಾರಿಗಳಿಂದ ಪಡೆದ ಗುರುತಿನ ಕಲೆಗಳು ಮತ್ತು ವಿವರದ ಮೂಲಪತ್ರ (ದ್ವಿಪ್ರತಿಯಲ್ಲಿ).<br>➢ ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಲ್ಪಟ್ಟ ಅರ್ಜಿದಾರರ ಮೂರು ಮಾದರಿ ಸಹಿಗಳ ಮೂಲಪತ್ರ (ದ್ವಿಪ್ರತಿಯಲ್ಲಿ).<br>➢ ಅರ್ಜಿದಾರರು ಪತ್ನಿಯೊಂದಿಗೆ ತೆಗೆಯಿಸಿದ ಭಾವಚಿತ್ರಗಳು- ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಲ್ಪಟ್ಟಿರಬೇಕು.<br>➢ ಅರ್ಜಿದಾರರು ಒದಗಿಸಿರುವ ಉರ್ದು ದಾಖಲೆಯ ಮೂಲಪತ್ರ.<br>➢ ವಿಧವಾ ಪ್ರಕರಣಗಳಲ್ಲಿ-<br>(ಅ) ಪತಿಯ ಮರಣ ಸಮರ್ಥನಾ ಪತ್ರದ ಮೂಲ ಪ್ರತಿ.<br>(ಆ) ಸಂಬಂಧಿಸಿದ ತಹಶೀಲ್ದಾರ್ ರವರಿಂದ ಪಡೆದ ವಾರಸುದಾರರ ಪ್ರಮಾಣ ಪತ್ರದ ಮೂಲ ಪ್ರತಿ.<br>➢ ಅರ್ಜಿಯನ್ನು ಪೂರ್ಣವಾಗಿ ಭರ್ತಿ ಮಾಡಿ ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿರಬೇಕು.<br>➢ ಅರ್ಜಿದಾರರ ಮೂಲ ಜನನ ಪ್ರಮಾಣ ಪತ್ರ.<br>➢ ಈ ಹಿಂದೆ ರಾಜ್ಯ ಗೌರವಧನ ಧನಕ್ಕಾಗಿ ಅರ್ಜಿಸಲ್ಲಿಸಿದ್ದರೆ ಅದಕ್ಕೆ ಆಧಾರವಾಗಿ ರಾಜ್ಯ ಸರ್ಕಾರದಿಂದ ಬಂದ ಪತ್ರ |

| ಕ್ರಮ ಸಂಖ್ಯೆ | ಯೋಜನೆ / ಕಾರ್ಯಕ್ರಮದ ಹೆಸರು | ಪಿಂಚಣಿ ಮೊತ್ತ | ಯೋಜನೆ ಸೌಲಭ್ಯ ಪಡೆಯಲು ಫಲಾನುಭವಿಗಳಿಗೆ ಇರಬೇಕಾದ ಅರ್ಹತೆ | ಸಲ್ಲಿಸಬೇಕಾದ ದಾಖಲೆಗಳು |
|---|---|---|---|---|
| | | | | ಅಥವಾ ಜಿಲ್ಲಾಧಿಕಾರಿಗಳು/ತಹಶೀಲ್ದಾರ್ ರವರಿಂದ ಪಡೆದ ಪತ್ರಗಳಿದ್ದರೆ ಪ್ರತಿಯನ್ನು ಒದಗಿಸುವುದು.<br>➢ ವಿಳಂಬವಾಗಿ ಅರ್ಜಿ ಸಲ್ಲಿಸಿರುವ ಬಗ್ಗೆ ಕಾರಣ ನೀಡುವ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ರವರ ಮುಂದೆ ಪ್ರಮಾಣ ಮಾಡಿದ ಅಫಿಡವಿಟ್. |
| 12 | ಗೋವಾ ಸ್ವತಂತ್ರ ಹೋರಾಟಗಾರರ ಪಿಂಚಣಿ | ರೂ.9000 | ಗೋವಾ ಸ್ವತಂತ್ರ ಹೋರಾಟಗಾರರಿಗೆ ಮಾಸಿಕ ಪಿಂಚಣಿ ಸೌಲಭ್ಯ ಹಾಗೂ ಕುಟುಂಬ ಪಿಂಚಣಿ | ➢ ದಿನಾಂಕ: 01.01.1991 ರಿಂದ 19.04.1995ರ ಪೂರ್ಣ ಅವಧಿಯವರೆಗೆ ರಾಜ್ಯ ಗೋವಾ ಗೌರವಧನ ಪಡೆದಿರುವ ಗೋವಾ ವಿಮೋಚನಾ ಚಳುವಳಿಗಾರರಿಗೆ ಮಾತ್ರ ರಾಜ್ಯ ಗೋವಾ ಗೌರವಧನವನ್ನು ಮಂಜೂರು ಮಾಡುವುದು.<br>➢ ಈಗಾಗಲೇ ಸ್ವಾತಂತ್ರ್ಯ ಹೋರಾಟಗಾರರ ರಾಜ್ಯ ಹಾಗೂ ಕೇಂದ್ರ ಗೌರವಧನ ಪಡೆಯುತ್ತಿರುವವರಿಗೆ ಈ ಯೋಜನೆ ಅನ್ವಯಿಸುವುದಿಲ್ಲ.<br>➢ ಗೋವಾ ವಿಮೋಚನಾ ಚಳುವಳಿಗಾರರು ದಿನಾಂಕ:01.01.1991 ರಿಂದ 19.04.1995ರ ಪೂರ್ಣ ಅವಧಿಯವರೆಗೆ ರಾಜ್ಯ ಗೋವಾ ಗೌರವಧನ ಮಂಜೂರಾಗಿರುವ ಸರ್ಕಾರದ ಆದೇಶದ ಪ್ರತಿ ಹಾಗೂ ಪಿಪಿಓ ಗಳನ್ನುಒದಗಿಸುವುದು.<br>➢ ಗೋವಾ ವಿಮೋಚನಾ ಚಳುವಳಿಗಾರರನ್ನು ಗುರುತಿಸುವ ಸಲುವಾಗಿ ಅವರ ವಿಳಾಸದ ಬಗ್ಗೆ ಸ್ಥಳೀಯ ವಿಚಾರಣೆ/ಮಹಜರನ್ನು ಕಂದಾಯ ಇಲಾಖೆಯ ಅಧಿಕಾರಿಗಳು ನಡೆಸಿ, ವರದಿ ಸಲ್ಲಿಸುವುದು. |

G. N. [signature]

**ಸರ್ಕಾರದ ಅಧೀನ ಕಾರ್ಯದರ್ಶಿ**
**ಕಂದಾಯ ಇಲಾಖೆ (ಕೆ.ಎ.ಟಿ. & ದಾ ನಿ)**
**ಕರ್ನಾಟಕ ಸರ್ಕಾರದ ಸಚಿವಾಲಯ**
**ಬೆಂಗಳೂರು - 560 001**